**ಪಿ.ಡಬ್ಲ್ಯೂ ಃ 2**

**ಸಾಕ್ಷಿಗೆ ದಿನಾಂಕಃ 04.12.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರಃ ಶ್ರೀ   ವಕೀಲರ ಮೂಲಕ ಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣಾ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

ಎರಡು ಕೇಸ್ ಶೀಟಗಳನ್ನು ಒಟ್ಟಾಗಿ ನಿಪಿ-**16** ಎಂದು, ಪೋಲೀಸ್ ಮಾಹಿತಿ ಪತ್ರವನ್ನು ನಿಪಿ-**17** ಎಂದು, ಎಂಎಲ್.ಸಿ. ಉತಾರವನ್ನು ನಿಪಿ-**18** ಎಂದು, **10** ಕ್ಷ - ಕಿರಣಗಳನ್ನು ಒಟ್ಟಾಗಿ ನಿಪಿ-**19** ಎಂದು, ಇತ್ತೀಚಿನ ಎರಡು ಕ್ಷ - ಕಿರಣಗಳನ್ನು ಒಟ್ಟಾಗಿ ನಿಪಿ-**20** ಎಂದು, ನೂನ್ಯತೆಯ ಬಗ್ಗೆ ಪಮಾಣಪತ್ರವನ್ನು ನಿಪಿ-**21** ಎಂದು, ಹೊರ ರೋಗಿ ವಿಬಾಗದ ಇತ್ತೀಚಿನ ಚೀಟಿಯನ್ನು ನಿಪಿ-**22** ಎಂದು

1. ಗುರುತಿಸಿಕೊಳ್ಳಲಾಯಿತು.

**ಪಾಟೀ ಸವಾಲು 2ನೇ ಎದುರುದಾರರರ ಪರ ವಕೀಲರಿಂದ**

ಅರ್ಜಿದಾರರು ಮೊದಲು ಮಳವಳ್ಳಿ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಮೈಸೂರಿಗೆ ಬಂದಿದ್ದರು. ಮಳವಳ್ಳಿ ಸರ್ಕಾರಿ ಅಸ್ಪತ್ರೆಯಲ್ಲಿ ಅರ್ಜಿದಾರರನ್ನು ನಾನು ಮೊದಲು ನೋಡಿದ್ದೆ ಎಂದರೆ ಸರಿ. ನಾನು ಸದರಿ ಅಸ್ಪತ್ರೆಯಲ್ಲಿ ಅರ್ಜಿದಾರರಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿರುತ್ತೇನೆ. ಸ್ಪಂದನಾ ಅಸ್ಪತ್ರೆಯಲ್ಲಿ ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿರುತ್ತೇನೆ. ವೀನಸ್ ಅಸ್ಪತ್ರೆಯಲ್ಲಿ ಸಹ ನಾನು ಅರ್ಜಿದಾರರಿಗೆ ಚಿಕಿತ್ಸೆ ನೀಡಿರುತ್ತೇನೆ. ನಾನು ಸರ್ಕಾರಿ ವೈದ್ಯ ಅಗಿರುತ್ತೇನೆ ಎಂದರೆ ಸರಿ. ನಾನು ಖಾಸಗೀ ಅಸ್ಪತ್ರೆಯಲ್ಲಿ ಚಿಕಿತ್ಸೆ ನೀಡುವ ಬಗ್ಗೆ ಮೇಲಾಧಿಕಾರಿಗಳಿಂದ ಅನುಮತಿ ಪಡೆದಿರುತ್ತೇನೆ. ಸದರಿ ಅನುಮತಿಯ ದಾಖಲೆಯನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಮಳವಳ್ಳಿ ಅಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದಾಗ ಸ್ಪಂದನಾ ಅಸ್ಪತ್ರೆಗೆ ಹೋಗುವಂತೆ ಅರ್ಜಿದಾರರಿಗೆ ನಾನು ಸಲಹೆ ನೀಡಿದ್ದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತೀವ್ರ ಸ್ವರೂಪದ ಗಾಯಗಳು ಅಗಿದ್ದ ಕಾರಣ **16** ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಆ ರೀತಿಯ ಚಿಕಿತ್ಸೆಯನ್ನು ಸರ್ಕಾರಿ ಅಸ್ಪತ್ರೆಯಲ್ಲಿ ನೀಡಬಹುದಾಗಿತ್ತು ಎಂದರೆ ಆ ರೀತಿ ವ್ಯವಸ್ಥೆ ಸರ್ಕಾರಿ ಅಸ್ಪತ್ರೆಯಲ್ಲಿ ಇರುವುದಿಲ್ಲ. ಅರ್ಜಿದಾರರು ದಿನಾಂಕ **23.10.2022** ರಂದು ಅಸ್ಪತ್ರೆಯಿಂದ ಬಿಡುಗಡೆಯಾದಾಗ ನಾನು ನೀಡಿದ ಸಲಹೆ ಸೂಚನೆಗಳನ್ನು ಅರ್ಜಿದಾರರು ಪಾಲನೆ ಮಾಡಿರುತ್ತಾರೆ. ಆ ರೀತಿ ಪಾಲನೆ ಮಾಡಿದರೆ ನೋವು ಕಡಿಮೆ ಅಗುವ ಸಾದ್ಯತೆ ಇತ್ತು ಎಂದರೆ ಸರಿ.

ಅರ್ಜಿದಾರರ ತೊಡೆಯ ಮೂಳೆ ಸರಿ ಹೋಗದ ಕಾರಣ ವೀನಾಸ್ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಸ್ಪಂದನಾ ಅಸ್ಪತ್ರೆಯಲ್ಲಿ ಸದರಿ ಕಾಲಕ್ಕೆ ಅಷ್ಟೊಂದು ವ್ಯವಸ್ಥೆ ಇಲ್ಲದ ಕಾರಣ ವೀನಾಸ್ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಸ್ಪಂದನಾ ಅಸ್ಪತ್ರೆಯಲ್ಲಿ ಸರಿಯಾಗಿ ಚಿಕಿತ್ಸೆ ನೀಡದ ಕಾರಣ ವೀನಾಸ್ ಅಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಾಗಿ ಅರ್ಜಿದಾರರು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಕುತ್ತಿಗೆ ಮೂಳೆ ಮತ್ತು ತೊಡೆ ಮೂಳೆಗೆ ಶಸ್ತ್ರ ಚಿಕಿತ್ಸೆ ಅಗಿರುತ್ತದೆ. ನಾನು ಮತ್ತು ಡಾಃ ಸಂತೋಷ ರವರು ಸೇರಿ ಶಸ್ತ್ರ ಚಿಕಿತ್ಸೆ ಮಾಡಿರುತ್ತೇವೆ. ದಿನಾಂಕ **26.11.2025** ರ ಪೂರ್ವದಲ್ಲಿ ಅರ್ಜಿದಾರರು ಚಿಕಿತ್ಸೆ ಪಡೆದ ಬಗ್ಗೆ ನಮ್ಮ ಬಳಿ ದಾಖಲೆ ಇರುವುದಿಲ್ಲ ಅರ್ಜಿದಾರರ ಬಳಿ ಇರುತ್ತದೆ. ಅರ್ಜಿದಾರರು ಮಳವಳ್ಳಿ ಸರ್ಕಾರಿ ಅಸ್ಪತ್ರ ಮತ್ತು

ಮೈಸೂರಿನ ಅಸ್ಪತ್ರೆಗಳಲ್ಲಿ ಹೊರ ರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಅರ್ಜಿದಾರರ ದೇಹದಲ್ಲಿ ಇರುವ ರಾಡನ್ನು ತೆಗೆದಿರುವುದಿಲ್ಲ. ಆ ರೀತಿ ರಾಡನ್ನು ಹೊರ ತೆಗೆದರೆ ನ್ಯೂನ್ಯತೆ ಕಡಿಮೆ ಅಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಚೆಕ್ ಎಕ್ಸರೆ ಮಾಡಿದ್ದು, ಸದರಿ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಅರ್ಜಿದಾರರಿಗೆ ಮೂಳೆ ವಕ್ರ ಅಗಿತ್ತು. ನ್ಯೂನ್ಯತೆಯನ್ನು ಒಟ್ಟಾಗಿ ಹೇಳಬಹುದಾಗಿತ್ತು ಎಂದರೆ ಒಟ್ಟಾರೆ ದೇಹಕ್ಕೆ ತೆಗೆದುಕೊಂಡರೆ ಒಂದೇ ನ್ಯೂನ್ಯತಯನ್ನು ಹೇಳಬೇಕು. ನಾನು ಹೇಳುವ ಬಗ್ಗೆ **coordinated activate and extra points** ಮೊಬಿಲಿಟಿಯಲ್ಲಿ ಸೇರುತ್ತದೆ ಎಂದರೆ ಸರಿಯಲ್ಲ. ನಾನು ಹೇಳುವ ಶೇಕಡ **54** ನ್ಯೂನ್ಯತೆಯನ್ನು ಸಂಪೂರ್ಣ ದೇಹಕ್ಕೆ **1/3** ಭಾಗ ಮಾಡಬೇಕಾಗುತ್ತದೆ. ಅರ್ಜಿದಾರರು ವಿದ್ಯಾರ್ಥಿ ಅಗಿದ್ದರು. ಅರ್ಜಿದಾರರಿಗೆ ಚಿಕ್ಕ ವಯಸ್ಸು ಅಗಿರುವುದರಿಂದ ಮುಂದೆ ನ್ಯೂನ್ಯತೆ ಕಡಿಮೆ ಅಗುವ ಸಂಭವ ಇದೆ ಎದರೆ ಸರಿಯಲ್ಲ. ಒಬ್ಬ ವ್ಯಕ್ತಿಯ ದೇಹದಲ್ಲಿ ರಾಡನ್ನು ಅಳವಡಿಸಿದಾಗ ನ್ಯೂನ್ಯತೆಯನ್ನು ಹೇಳಲು ಸಾದ್ಯವಿಲ್ಲ ಎಂದರೆ ಸರಿಯಿಲ್ಲ. ಅರ್ಜಿದಾರರಿಗ ಸಹಾಯ ಮಾಡಲು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಅರ್ಜಿದಾರರ ಪರಃ ಶ್ರೀ ವಕೀಲರ ಮೂಲಕ ಃ**

ಭವಿಷ್ಯದ ಖರ್ಚಿಗೆ ಅಂದರೆ ರಾಡನ್ನು ಹೊರತೆಗೆಯಲು ಅರ್ಜಿದಾರರಿಗೆ ಸುಮಾರು **50** ಸಾವಿರ ರೂಪಾಯಿ ಖರ್ಚು ಅಗುತ್ತದೆ.

**ಪಾಟೀ ಸವಾಲು 2ನೇ ಎದುರುದಾರರರ ಪರ ವಕೀಲರಿಂದ**

ಅರ್ಜಿದಾರರು ಕೊನೆಯ ಬಾರಿ ಚಿಕಿತ್ಸೆಗೆ ಬಂದಿದ್ದಾಗಈ ಮೇಲೆ ಹೇಳಿದಂತೆ **50** ಸಾವಿರ ಖರ್ಚು ಅಗುತ್ತದೆ ಎಂದು ಅವರಿಗೆ ಮೌಖಿಕವಾಗಿ ಹೇಳಿದ್ದೆ ಮತ್ತು ಸದ್ಯಕ್ಕೆ ಅದನ್ನು ತೆಗೆಸಬಾರದಾಗಿ ಸಲಹೆ ನೀಡಿರುತ್ತೇನೆ. ಅರ್ಜಿದಾರರಿಗೆ ಯಾವುದೇ ಬವಿಷ್ಯದ ಖರ್ಚು ಅಗತ್ಯ ಇಲ್ಲದೇ ಇದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.